# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/243/15-16

ದಿನಾಂಕ :16-09-2016

ಉಪಸ್ಥಿತರು: ಶ್ರೀ ಲೋಕೇಶ್ ಪಿ.ಎನ್ (ಕ.ಆ.ಸೇ)

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| 1)ಶ್ರೀ ವೆಂಕಟೇಶಲು ತಂದೆ ಲೇಟ್ ಚಿನ್ನ ದುರ್ಗಣ್ಣ ಅಂದ್ರಾಳ್ ಗ್ರಾಮ ಬಳ್ಳಾರಿ ತಾ, ಜಿ,<br>ಶ್ರೀ ಪಿ.ಹೆಚ್ ಮಂಜುನಾಥ ವಕೀಲರು ಬಳ್ಳಾರಿ | 1)ತಹಶೀಲ್ದಾರು ಬಳ್ಳಾರಿ<br>2)ಕಂದಾಯ ನಿರೀಕ್ಷಕರು ಬಳ್ಳಾರಿ |

ದಾವಾ ಜಮೀನಿನ ವಿವರ :-

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಬಳ್ಳಾರಿ | ಅಂದ್ರಾಳ್ | 12ಬಿ/5 | 0.02 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು ಬಳ್ಳಾರಿ ಇವರ ಎಂ ಆರ್ ನಂ 47/1999-2000 ದಿನಾಂಕ 15-05-2000 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ಸಲ್ಲಿಸುವಲ್ಲಿ ಆದ ವಿಳಂಬಕ್ಕೆ ಕಾಲಮಿತಿ ಕಾಯ್ದೆಯಡಿ ವಿಳಂಬ ಮನ್ನಾಕ್ಕೆ ಅರ್ಜಿ ಸಲ್ಲಿಸಿರುತ್ತಾರೆ. ವಿಳಂಬ ಮನ್ನಾ ಮಾಡಿ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಟಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ:16-09-2016 ರಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅಪೀಲುದಾರರ ಪರ ವಕೀಲರು ದಿನಾಂಕ: 16-09-2016 ರಂದು ಈ ನ್ಯಾಯಾಲಯಕ್ಕೆ ಹಾಜರಾಗಿ, ಬಳ್ಳಾರಿ ತಾಲ್ಲೂಕಿನ ಅಂದ್ರಾಳ್ ಗ್ರಾಮದ ಸ.ನಂ 12ಬಿ/5 ವಿಸ್ತೀರ್ಣ: 0.02 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು ಬಳ್ಳಾರಿ ಇವರು ಎಂ ಆರ್ ನಂ 47/1999-2000 ದಿನಾಂಕ 15/05/2000 ರನ್ನು ಪ್ರಶ್ನಿಸುತ್ತಾ, ಮೇಲ್ಮನವಿದಾರರು ದುರುಗಣ್ಣ ತಂದೆ ಚಿನ್ನದುರಗಣ್ಣ ಇವರಿಂದ ನೊಂದಾಯಿತ ಕ್ರಯ ಪತ್ರ ಸಂಖ್ಯೆ 4613/99-2000 ದಿನಾಂಕ 10-02-2000 ರಲ್ಲಿ ಸದರಿ ಜಮೀನನ್ನು ಖರೀದಿಸಿದ್ದು , ಸದರಿ ಖರೀದಿ ಪತ್ರದಂತೆ ಹಕ್ಕು ದಾಖಲಿಸಲು ಕೋರಿರುತ್ತಾರೆ. ಮುಂದುವರೆದು ಪ್ರಕರಣದಲ್ಲಿನ ಲಭ್ಯ ದಾಖಲೆಗಳನ್ನು ಪರಿಶೀಲಿಸಲಾಗಿ, ಸದರಿ ವಿವಾದಾಸ್ಪದ ಜಮೀನಿನ ವಿವಾದವು ಪಹಣಿ ತಿದ್ದುಪಡಿ ವ್ಯಾಪ್ತಿಗೆ ಬರುತಿದ್ದು , ಕಾರಣ ಈ ಕೆಳಕಂಡ ಆದೇಶ

## :: ಆದೇಶ ::

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಬಳ್ಳಾರಿ ತಾಲ್ಲೂಕಿನ ಅಂದ್ರಾಳ್ ಗ್ರಾಮದ ಸ.ನಂ 12ಬಿ/5 ವಿಸ್ತೀರ್ಣ: 0.02 ಎಕರೆ ಜಮೀನಿಗೆ ಸಂಬಂಧಿಸಿದಂತೆ ಪ್ರಕರಣವು ತಿದ್ದು ಪಡಿವ್ಯಾಪ್ತಿಗೆ ಸಂಬಂಧಿಸಿದ್ದಾಗಿದ್ದು, ಅಪೀಲುದಾರರಿಂದ ಅಗತ್ಯ ದಾಖಲೆ ಪಡೆದು ಮೂಲ ಕಂದಾಯ ದಾಖಲೆಗಳೊಂದಿಗೆ ಪರಿಶೀಲಿಸಿ, ಅಗತ್ಯ ತಿದ್ದುಪಡಿ ಪ್ರಸ್ತಾವನೆ ತಯಾರಿಸಿ, ಈ ಪ್ರಾದಿಕಾರದ ಅನುಮೋದನೆ ಪಡೆಯಲು ತಹಶೀಲ್ದಾರರು ಬಳ್ಳಾರಿ ಇವರಿಗೆ ಆದೇಶಿಸಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 16-09-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,

ಬಳ್ಳಾರಿ.

ಪ್ರತಿಯನ್ನು ವಾದಿ ಗಳಿಗೆ ಹಾಗೂ ತಹಶೀಲ್ದಾರರು ಬಳ್ಳಾರಿ ಇವರಿಗೆ ಮುಂದಿನ ಕ್ರಮಕ್ಕಾಗಿ